## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು

## ಸಿಸಿ ನಂ.726/2023

**ಫಿರ್ಯಾದುದಾರರುಃ** ಶ್ರೀ. ಸಿ.ಶಿವಣ್ಣ, ಬಿನ್ ಲೇಟ್ ಚನ್ನೇಗೌಡ,
ವಯಸ್ಸು ಸುಮಾರು 71 ವರ್ಷ,
ವಾಸಃ ನಂ.295, ಸ್ಟೋರ್ ಬೀದಿ,
ಹುಣಸೂರು ಟೌನ್.

**– ವಿರುದ್ಧ –**

**ಆರೋಪಿಃ** ಶ್ರೀಮತಿ ಬಿ.ಎಂ.ರಾಜೇಶ್ವರಿ, ಕೋಂ ಬಿ.ನಾಗರಾಜು,
ವಯಸ್ಸು ಸುಮಾರು 35 ವರ್ಷ, ವಾಸಃ ನಂ. 3046/60,
ಹಳೇ ಬಿ.ಎಂ.ರಸ್ತೆ, ಮಂಜುನಾಥ ಬಡಾವಣೆ,
ಹುಣಸೂರು ಟೌನ್.

ಕೆಲಸದ ಸ್ಥಳಃ ಹೈ ಫಾ ಬ್ಯೂಟಿ ಪಾರ್ಲರ್,
ಸುಮಂಗಲಿ ಟೆಕ್ಸಟೈಲ್ಸ್, ಬಜಾರ್ ರಸ್ತೆ,
ಹುಣಸೂರು ಟೌನ್.

### ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ಸಿ.ಶಿವಣ್ಣ ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿದಿದೆ |
| ಪ್ರಶ್ನೆ 2: | ಪಿ.ಡಬ್ಲ್ಯೂ1 ಸಿ.ಶಿವಣ್ಣ ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಮತ್ತು ಅವರು ಹಲವಾರು ವರ್ಷಗಳಿಂದ ಪರಿಚಿತರಾಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಪರಿಚಯದ ಆಧಾರದ ಮೇಲೆ ನೀವು ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ಅಂದರೆ ಹಳೆಯ ಸಾಲ ತೀರಿಸಲು ಮತ್ತು ಗೃಹಕೃತ್ಯದ ಖರ್ಚಿಗಾಗಿ ಮರುಪಾವತಿಸುವುದಾಗಿ ಹೇಳಿ ರೂ.4,00,000/-ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಮರುಪಾವತಿ ಮಾಡುವಂತೆ ಅವರು ನಿಮ್ಮನ್ನು ಕೇಳಿದಾಗ ನೀವು 29.08.2023 ರ ದಿನಾಂಕ ನಮೂದಿಸಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಚೆಕ್ ನಂ.529064 ಅನ್ನು ರೂ.4,00,000/- ಗಳಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ಅವರು ತಮ್ಮ ಬ್ಯಾಂಕ್ ಆದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಕಾರಣಕ್ಕೆ ಸದರಿ ಚೆಕ್ ದಿನಾಂಕಃ 31.08.2023 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |

| | |
|---|---|
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ದಿನಾಂಕ 21.09.2023ರಂದು ಅವರು ನಿಮಗೆ ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ನಿಮ್ಮ ವಾಸದ ವಿಳಾಸ ಮತ್ತು ಕೆಲಸದ ಸ್ಥಳಕ್ಕೆ ನೋಟೀಸನ್ನು ನೀಡಿದ್ದು, ವಾಸದ ವಿಳಾಸಕ್ಕೆ ಕಳುಹಿಸಿದ ನೋಟೀಸ್ ದಿನಾಂಕಃ 23.09.2023ರಂದು ನಿಮಗೆ ಜಾರಿಯಾಗಿದ್ದು, ಕೆಲಸದ ಸ್ಥಳಕ್ಕೆ ಕಳುಹಿಸಿದ ನೋಟೀಸನ್ನು ನೀವು ತಿರಸ್ಕರಿಸಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಮನೆಗೆ ಬಂದಿದೆ, ಪಾರ್ಲರಿಗೆ ನೋಟೀಸ್ ಬಂದಿಲ್ಲ. |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದರೂ ಸಹ ನೀವು ಈವರೆಗೂ ಸಾಲದ ಹಣವನ್ನು ಮರುಪಾವತಿಸದೆ ಇರುವುದರಿಂದ ನೆಗೋಶಿಯೇಬಲ್ ಇನ್ಸ್ಟುಮೆಂಟ್ಸ್ ಕಾಯಿದೆಯ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಎರಡು ಅಂಚೆ ರಶೀದಿಗಳು, ಅಂಚೆ ಸ್ವೀಕೃತಿ ಪತ್ರ, ಅಂಚೆ ಲಕೋಟೆ, Track consignment ಮತ್ತು ದೂರನ್ನು ನಿಪಿ-1 ರಿಂದ ನಿಪಿ-9 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಪ್ರಶ್ನೆ 9: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ |
| ಪ್ರಶ್ನೆ 10: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 26.11.2025.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ